**<u>ಅಸಲು ದಾವಾ ಸಂಖ್ಯೆ -115/2023</u>** **ಡಿ.ಡಬ್ಲ್ಯೂ:-2**

ದಿನಾಂಕಃ **27.02.2026** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- 6, 8 ಮತ್ತು 9 ನೇ ಪ್ರತಿವಾದಿ ಪರ ವಕೀಲರಿಂದ :-</u>**

ನನಗೆ ಓದು ಬರಹ ಬರುವುದಿಲ್ಲ. ಆದರೆ ನನ್ನ ಸಹಿ ಮಾತ್ರ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನಗೆ 2 ಎಕರೆ ಜಮೀನು ಇರುತ್ತದೆ ಆದರೆ ಅದರ ಸರ್ವೇ ನಂಬರ್ ನನಗೆ ನೆನಪಿಲ್ಲ. ವಾದಿಯು ತಮಗೆ ಸೇರಿದ ಆಸ್ತಿಗಳ ಮೇಲೆ ದಾವೆಯನ್ನು ಸಲ್ಲಿಸಿದ್ದಾರೆ. ವಾದಿಯ ತಂದೆ ಹನುಮಂತಪ್ಪನನ್ನು ನೋಡಿದ್ದೀರಾ ಎಂದರೆ ಸಾಕ್ಷಿಯು ನಾವು ಚಿಕ್ಕ ವಯಸ್ಸಿನವರಿದ್ದಾಗ ನೋಡಿದ್ದೇವು ಎಂದು ನುಡಿಯುತ್ತಾರೆ. ವಾದಿಯ ತಂದೆ ವ್ಯವಸಾಯ ಕೆಲಸವನ್ನು ಹೊರತುಪಡಿಸಿ ಬೇರೆ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ. ವಾದಿಯ ತಂದೆ ಜೀವಿತ ಕಾಲದಲ್ಲಿ 3 ಎಕರೆ ಜಮೀನಿನಲ್ಲಿ ವ್ಯವಸಾಯವನ್ನು ಮಾಡುತ್ತಿದ್ದರು. 3 ಎಕರೆ ಜಮೀನನ್ನು ಹೊರತುಪಡಿಸಿ ವಾದಿಯ ತಂದೆ ಸರ್ಕಾರಕ್ಕೆ ಸೇರಿದ 1 ಎಕರೆ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದರು. ವಾದಿಯ ತಂದೆ ಹನುಮಂತಪ್ಪ ಯಾವಾಗ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹನುಮಂತಪ್ಪನಿಗೆ 1 ನೇ ಪ್ರತಿವಾದಿಯ ಗಂಡ ಶೇಷಗಿರಿಯಪ್ಪ ಮೊದಲನೇ ಮಗ. ಹನುಮಂತಪ್ಪ ತೀರಿಕೊಂಡ ನಂತರ ಮನೆಯ ವ್ಯವಹಾರವನ್ನು 1 ನೇ ಪ್ರತಿವಾದಿಯ ಗಂಡ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಗಂಡ ದಾವಾ ಐಟಂ ನಂ.2 ರ ಆಸ್ತಿಗೆ ಸಂಬಂಧಿಸಿದಂತೆ ಅರ್ಜಿಯನ್ನು ಯಾವಾಗ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ, 1 ನೇ ಪ್ರತಿವಾದಿಯ ಗಂಡ ಮತ್ತು 6 ನೇ ಪ್ರತಿವಾದಿಯ ನಡುವೆ ನಡೆದ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. 3 ಎಕರೆ ಜಮೀನಿನಲ್ಲಿ ವಾದಿ, 1 ನೇ ಪ್ರತಿವಾದಿಯ ಗಂಡ ಮತ್ತು 6 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ, 1 ನೇ ಪ್ರತಿವಾದಿಯ

ಗಂಡ ಮತ್ತು 6 ನೇ ಪ್ರತಿವಾದಿ ತಲಾ 1 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುವ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನನ್ನು ಈ ದಾವೆಯಲ್ಲಿ ಸಾಕ್ಷಿ ಹೇಳಲು 2 ನೇ ಪ್ರತಿವಾದಿ ಕರೆದಿರುತ್ತಾರೆ. ನಾನು 2 ನೇ ಪ್ರತಿವಾದಿಯ ಜೊತೆ ವಿಶ್ವಾಸದಲ್ಲಿದ್ದೇನೆ ಎಂದರೆ ಸರಿ. ಹನುಮಂತಪ್ಪನಿಗೆ ಒಟ್ಟು 6 ಜನ ಮಕ್ಕಳು ಅಂದರೆ ಶೇಷಗಿರಿಯಪ್ಪ ಹನುಮಂತಪ್ಪ, ಸಿದ್ದಪ್ಪ ಮತ್ತು 3 ಜನ ಹೆಣ್ಣು ಮಕ್ಕಳು ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಹನುಮಂತಪ್ಪನ 3 ಜನ ಹೆಣ್ಣು ಮಕ್ಕಳು ಯಾವಾಗ ಮದುವೆಯಾಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿ, 1 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿಗಳು ತಮ್ಮಗಳ ನಡುವೆ ಸಣ್ಣ ಪುಟ್ಟ ವೈಮಸ್ಸಿನಿಂದ ಪ್ರತ್ಯೇಕವಾಗಿ ವಾಸವಾಗಿದ್ದಾರೆ ವಿನಃ ಅವರ ನಡುವೆ ಯಾವುದೇ ಭಾಗಾಂಶ ಆಗಿಲ್ಲ ಎಂದರೆ ಸರಿಯಲ್ಲ. ಹನುಮಂತಪ್ಪನ 3 ಜನ ಮಕ್ಕಳಿಗೂ ಸಹ ದಾವಾ ಆಸ್ತಿಗಳಲ್ಲಿ ಸಮಾನವಾದ ಭಾಗಾಂಶದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಹನುಮಂತಪ್ಪನ ಮಕ್ಕಳ ಕುಟುಂಬದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ 2 ನೇ ಪ್ರತಿವಾದಿಯ ಮಾತಿಗೆ ಕಟ್ಟುಬಿದ್ದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.